148th, ಕ್ರ.ಸಂ. 40.

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಯು.ಬಿ.ವೆಂಕಟೇಶ್ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ "ರಾಜ್ಯದ ಅಂಗನವಾಡಿಗಳಿಗೆ ಪೌಷ್ಠಿಕ ಆಹಾರ ಪದಾರ್ಥ ಪೂರೈಸಲು ಕೇವಲ ಮೂರು ಮಹಿಳಾ ಸಂಘಗಳಿಗೆ ಅನುಮತಿ ನೀಡಿರುವ ಹಾಗೂ ಈ ಹಿಂದೆ ಕಳಪೆ ಆಹಾರ ಪೂರೈಕೆ ಮಾಡಿ ಕಪ್ಪು ಪಟ್ಟಿಗೆ ಸೇರಿದ್ದ ತಮಿಳುನಾಡು ಮೂಲದ ಸಂಸ್ಥೆಗಳಿಗೆ ಮತ್ತು ಕೆಂಪುಹಾಸು ಹಾಸಿರುವ ಪ್ರಕರಣದ ಬಗ್ಗೆ ದಿನಾಂಕ: 20/12/2022ರ ಪ್ರಜಾವಾಣಿ ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ರಾಜ್ಯದಲ್ಲಿ 137 ಮಹಿಳಾ ಪೂರಕ ಪೌಷ್ಠಿಕ ಆಹಾರ ಉತ್ಪಾದನಾ ಮತ್ತು ತರಬೇತಿ ಕೇಂದ್ರಗಳಿದ್ದು ಅವುಗಳಲ್ಲಿ ಕೇವಲ ಮೂರು ಸಂಘಗಳಿಗೆ ಸರಾಸರಿ ರೂ.2,000/- (ಎರಡು ಸಾವಿರ) ಕೋಟಿ ವಹಿವಾಟು ಇರುವ ಹೊಣೆಗಾರಿಕೆ ನಿಭಾಯಿಸಲು ಅನುಮತಿ ನೀಡಲಾಗಿದೆ. ಈ ಮೂರು ಕೇಂದ್ರಗಳನ್ನು 2012 ರಲ್ಲಿ ಅಂದಿನ ಸರ್ಕಾರಗಳು ನಿಷೇಧಿಸಿದ್ದವು. ತಮಿಳುನಾಡು ಮೂಲದ ಕಂಪನಿಯೊಂದು ಪರೋಕ್ಷವಾಗಿ ಮೂರು ಸಂಸ್ಥೆಗಳನ್ನು ರಚಿಸಿತ್ತು ಎನ್ನುವುದಕ್ಕೆ ಹಣ ವರ್ಗಾವಣೆ ಮಾಡಿರುವ ದಾಖಲೆಗಳು ಸಹ ಲಭ್ಯವಾಗಿರುತ್ತವೆ.

ಮಕ್ಕಳಿಗೆ ಸ್ಥಳೀಯ ಆಹಾರ ದೊರಕಬೇಕು ಎನ್ನುವ ಸುಪ್ರೀಂಕೋರ್ಟ್‌ನ ತೀರ್ಪಿನ ಆದೇಶದ ಹಿನ್ನಲೆಯಲ್ಲಿ ಮಹಿಳಾ ಸ್ವಸಹಾಯ ಗುಂಪುಗಳು, ಮಹಿಳಾ ಮಂಡಳಿಗಳು ಹಾಗೂ ಗ್ರಾಮ ಸಮುದಾಯಗಳಿಗೆ ಪೌಷ್ಠಿಕ ಆಹಾರ ತಯಾರಿಕೆ ಹಾಗೂ ಪೂರೈಕೆಯ ಹೊಣೆ ನೀಡಲು 2009 ರಲ್ಲೇ ಸರ್ಕಾರ ಆದೇಶ ಹೊರಡಿಸಿತ್ತು. 2012 ರಿಂದಲೂ 137 ಮಹಿಳಾ ಸ್ವಸಹಾಯ ಗುಂಪುಗಳು ಆಹಾರ ಪೂರೈಕೆ ಮಾಡುತ್ತಾ ಬರುತ್ತಿವೆ. ಇವರುಗಳು ಪೂರೈಸುತ್ತಿದ್ದ ಆಹಾರಗಳಲ್ಲಿ ಗುಣಮಟ್ಟದ ಆಹಾರ ಪದಾರ್ಥ, ಪ್ರೋಟೀನ್, ಕ್ಯಾಲೋರಿ ಅಳೆಯುವ ಮಾಪಕಗಳು ಇಲ್ಲ ಎನ್ನುವ ಆರೋಪ ಹೊರಿಸಿದ ಖಾಸಗಿ ಸಂಸ್ಥೆಗಳು ಹೈಕೋರ್ಟ್ ಮೊರೆ ಹೋಗಿದ್ದವು. ಕೋರ್ಟ್ ಕಡ್ಡಾಯವಾಗಿ ಬಿ.ಐ.ಎಸ್. ಪ್ರಮಾಣ ಪತ್ರ ಹೊಂದಿರಬೇಕೆಂದು ನೀಡಿದ ತೀರ್ಪಿನನ್ವಯ ಕ್ರಮ ಕೈಗೊಂಡಿರುವುದಾಗಿ ತಿಳಿಸಿರುವ ರಾಜ್ಯ ಸರ್ಕಾರದ ನಡೆಯ ವಿರುದ್ಧ ಅನುಮಾನಗಳು ಕಂಡು ಬಂದಿರುತ್ತವೆ. ಕಾರಣ, ರಾಜ್ಯದಲ್ಲಿ ಈಗಾಗಲೇ ಬಿ.ಐ.ಎಸ್. ಪ್ರಮಾಣಪತ್ರ ಹೊಂದಿರುವ 10 ಕ್ಕೂ ಹೆಚ್ಚು ಮಹಿಳಾ ಸ್ವಸಹಾಯ ಗುಂಪುಗಳಿದ್ದಾಗ್ಯೂ ಸಹ ಕೆಲವಕ್ಕೆ ಅನುಮತಿ ನೀಡಿ ಉಳಿದವುಗಳಿಗೆ ದೊಡ್ಡ ಪ್ರಮಾಣದಲ್ಲಿ ಆಹಾರ ಉತ್ಪಾದನಾ ಮಾಡುವ ಸಾಮರ್ಥ್ಯ, ಹಣಕಾಸಿನ ವಹಿವಾಟು ನಡೆಸಿದ ಅನುಭವ ಇಲ್ಲ ಎನ್ನುವ ಕಾರಣದಿಂದ ತಿರಸ್ಕರಿಸಿರುವುದು ತಿಳಿದು ಬಂದಿರುತ್ತದೆ.

ನ್ಯಾಯಾಲಯವು ಬಿ.ಐ.ಎಸ್. ಪ್ರಮಾಣ ಪತ್ರ ಪಡೆಯುವವರೆಗೆ ಪ್ರಮಾಣಪತ್ರ ಹೊಂದಿದ ಸಂಸ್ಥೆಗಳ ಜೊತೆ ತಾಂತ್ರಿಕ ನೆರವು ಪಡೆಯಲು ಒಪ್ಪಂದ ಮಾಡಿಕೊಳ್ಳುವಂತೆ ಸೂಚನೆ ನೀಡಿದ್ದರೂ ಕೇವಲ ಮೂರು ಸಂಸ್ಥೆಗಳಿಗೆ ಮಾತ್ರ ಆಹಾರ ತಯಾರಿಕೆಗೆ ಬೇಕಾದ ಪದಾರ್ಥಗಳ ಖರೀದಿಯ ಜವಾಬ್ದಾರಿಯನ್ನು ಸರ್ಕಾರ ನೀಡಿರುವುದು ಸಂಶಯಕ್ಕೆ ಕಾರಣವಾಗಿರುತ್ತದೆ.

ಸರ್ಕಾರ ಕೂಡಲೇ ಈ ವಿಚಾರದ ಬಗ್ಗೆ ಗಮನಹರಿಸಿ ರೂ.2,000/- ಕೋಟಿ ಮೊತ್ತದ ವಹಿವಾಟಿನಲ್ಲಿ ಅಕ್ರಮ ಅವಕಾಶವಿಲ್ಲದಂತೆ ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ" ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರ ಉತ್ತರ :

** ** **

ಸಮಗ್ರ ಶಿಶು ಅಭಿವೃದ್ಧಿ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿರುತ್ತದೆ. ಈ ಯೋಜನೆಯು 1975 ರಿಂದ ಜಾರಿಗೆ ಬಂದಿರುತ್ತದೆ. ಪ್ರಸ್ತುತ ರಾಜ್ಯದಲ್ಲಿ 204 ಶಿಶು ಅಭಿವೃದ್ಧಿ ಯೋಜನೆಗಳ ಮೂಲಕ 66361 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

ಪ್ರಸ್ತುತ ರಾಜ್ಯದಲ್ಲಿ 63030 ಮುಖ್ಯ ಅಂಗನವಾಡಿ ಹಾಗೂ 3331 ಮಿನಿ ಅಂಗನವಾಡಿ ಕೇಂದ್ರಗಳನ್ನೊಳಗೊಂಡಂತೆ ಒಟ್ಟು 66361 ಅಂಗನವಾಡಿ ಕೇಂದ್ರಗಳಿವೆ. ರಾಜ್ಯ ಸರ್ಕಾರದಿಂದ 450 ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡಲಾಗಿರುತ್ತದೆ.

ಮಾನ್ಯ ಸರ್ವೋಚ್ಛ ನ್ಯಾಯಾಲಯದ ಮಧ್ಯಂತರ ಆದೇಶದಂತೆ ರಾಜ್ಯದಲ್ಲಿ 137 ಮಹಿಳಾ ಪೂರಕ ಪೌಷ್ಠಿಕ ಆಹಾರ ಉತ್ಪಾದನಾ ಮತ್ತು ತರಬೇತಿ ಕೇಂದ್ರಗಳನ್ನು ಸ್ಥಾಪಿಸಲಾಗಿರುತ್ತದೆ. ಪ್ರಸ್ತುತ ಈ 137 ಮಹಿಳಾ ಪೂರಕ ಪೌಷ್ಠಿಕ ಆಹಾರ ಉತ್ಪಾದನಾ ಮತ್ತು ತರಬೇತಿ ಕೇಂದ್ರಗಳು ಆಹಾರ ಪದಾರ್ಥಗಳನ್ನು ಸಂಸ್ಕರಿಸಿ ಅಂಗನವಾಡಿ ಕೇಂದ್ರಗಳಿಗೆ ಸರಬರಾಜು ಮಾಡುತ್ತಿವೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದ್ದು, ಈ ಸಮಿತಿಯು ಆಹಾರ ಪದಾರ್ಥಗಳ ಬೆಲೆಗಳನ್ನು ನಿಗದಿಪಡಿಸುತ್ತಿದೆ.

ದಿನಾಂಕ: 24/02/2018 ರಂದು ಹೊರಡಿಸಿದ ಸರ್ಕಾರದ ಆದೇಶದಲ್ಲಿ ಬೇಳೆಕಾಳುಗಳನ್ನು ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರಿಕ ಸರಬರಾಜು ನಿಗಮವು ಸರಬರಾಜು ಮಾಡಬೇಕೆಂದು ಮತ್ತು ಇತರೆ ಕಚ್ಚಾ ಆಹಾರ ಪದಾರ್ಥಗಳನ್ನು (ಅಕ್ಕಿ, ಗೋಧಿ, ಎಣ್ಣೆಯನ್ನು ಹೊರತುಪಡಿಸಿ) ಕರ್ನಾಟಕ ರಾಜ್ಯ ಸಹಕಾರ ಗ್ರಾಹಕರ ಮಹಾಮಂಡಳ ನಿಯಮಿತ (ಜನತಾ ಬಜಾರ್) ಇವರಿಂದ ಖರೀದಿಸಲು ತಿಳಿಸಲಾಗಿತ್ತು. ಈ ಆದೇಶದ ವಿರುದ್ಧ ಎಂ.ಎಸ್.ಪಿ.ಟಿ.ಸಿ. ಗಳು ಮತ್ತು ಕೆಲವು ಸರಬರಾಜುದಾರರು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಗಳನ್ನು ಸಲ್ಲಿಸಿದ್ದರು.

ಪೂರಕ ಪೌಷ್ಠಿಕ ಆಹಾರದ ಗುಣಮಟ್ಟವನ್ನು ಉತ್ತಮಪಡಿಸುವ ಕುರಿತು ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಆಹಾರ ಪದಾರ್ಥಗಳ ಫೋರ್ಟಿಫಿಕೇಷನ್ ಮಾಡುವ ಬಗ್ಗೆ ಚರ್ಚಿಸಲಾಗಿರುತ್ತದೆ. ಸರ್ಕಾರದ ಅನುಮೋದನೆಯಂತೆ ಎಂ.ಎಸ್.ಪಿ.ಟಿ.ಸಿ. ಗಳು ಬಿ.ಐ.ಎಸ್. ಮಹಿಳಾ ಗುಂಪುಗಳ ತಾಂತ್ರಿಕ ಸಹಾಯ ಪಡೆಯಲು ಅನುವಾಗುವಂತೆ ದಿನಾಂಕ: 02/07/2020 ರಂದು ಇಲಾಖೆಯು ಸುತ್ತೋಲೆಯನ್ನು ಹೊರಡಿಸಿರುತ್ತದೆ.

ಸರ್ಕಾರವು ದಿನಾಂಕ: 05/05/2021 ರಂದು ಆದೇಶ ಹೊರಡಿಸಿ ಸದರಿ ಆದೇಶದಲ್ಲಿ ದಿನಾಂಕ: 02/07/2020ರ ಸುತ್ತೋಲೆಯನ್ವಯ ಎಂ.ಎಸ್.ಪಿ.ಟಿ.ಸಿ. ಗಳು ಬಿ.ಐ.ಎಸ್. ಮಾನ್ಯತೆ ಹೊಂದಿರುವ ಮಹಿಳಾ ಗುಂಪುಗಳೊಂದಿಗೆ ತಾಂತ್ರಿಕ ಸಹಾಯ ಪಡೆಯಲು ಒಪ್ಪಂದ ಮಾಡಿಕೊಳ್ಳಲು ಅನುಮೋದನೆ ನೀಡಿ ಆದೇಶಿಸಿದೆ. ಮುಂದುವರೆದು, ಸರ್ಕಾರದ ಆದೇಶ ದಿನಾಂಕ: 15/05/2021 ರಲ್ಲಿ ದಿನಾಂಕ: 05/05/2021 ರ ಆದೇಶವನ್ನು ಮತ್ತು ದಿನಾಂಕ: 20/05/2021ರ ಆದೇಶದಲ್ಲಿ ಇಲಾಖೆಯು ಹೊರಡಿಸಿದ್ದ ದಿನಾಂಕ: 02/07/2020 ರ ಸುತ್ತೋಲೆಯನ್ನು ಹಿಂಪಡೆಯಲಾಗಿರುತ್ತದೆ.

ಮಹಿಳಾ ಗುಂಪುಗಳೊಂದಿಗೆ ಒಪ್ಪಂದ ಮಾಡಿಕೊಳ್ಳುವ ಕುರಿತಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 21/06/2021 ರಂದು ಸಮಿತಿಯನ್ನು ರಚಿಸಲಾಗಿತ್ತು. ಸಮಿತಿಯು ಸಭೆ ಸೇರಿ Defence Food and Research Laboratory (DFRL) ಹಾಗೂ Food and Nutrition Board (FNB) ನ ಪ್ರತಿನಿಧಿಗಳು ಅಂಗನವಾಡಿ ಕೇಂದ್ರಗಳಿಗೆ ಭೇಟಿ ನೀಡಿ ಆಹಾರ ಪದಾರ್ಥಗಳ ಗುಣಮಟ್ಟದ ಬಗ್ಗೆ ಅಧ್ಯಯನ ಕೈಗೊಂಡು ಜಂಟಿ ವರದಿಯನ್ನು ಸಲ್ಲಿಸುವಂತೆ ತಿಳಿಸಲಾಗಿತ್ತು.

ಜಂಟಿ ವರದಿಯ ಆಧಾರದಲ್ಲಿ ಸಮಿತಿಯು ಈ ಕೆಳಗಿನಂತೆ ಶಿಫಾರಸ್ಸು ಮಾಡಿರುತ್ತದೆ.

- ಎಂ.ಎಸ್.ಪಿ.ಟಿ.ಸಿ. ಗಳು ತಾಂತ್ರಿಕ ಸಹಾಯವನ್ನು ಪಡೆಯಲು ಮತ್ತು ಅಕ್ಕಿ ಮತ್ತು ಗೋಧಿಯನ್ನು ಭಾರತೀಯ ಆಹಾರ ನಿಗಮದಿಂದ, ಹಾಲಿನ ಪುಡಿಯನ್ನು ಕೆ.ಎಂ.ಎಫ್. ನಿಂದ, ಎಣ್ಣೆಯನ್ನು ಕೆ.ಓ.ಎಫ್. ಮೂಲಕ ಮತ್ತು ಬೇಳೆಗಳನ್ನು ಕರ್ನಾಟಕ ರಾಜ್ಯ ಆಹಾರ ನಾಗರಿಕ ಸರಬರಾಜು ನಿಗಮದ ಮೂಲಕ ಪಡೆಯಲು ತಿಳಿಸಲಾಗಿದೆ. ಮುಂದುವರೆದು, ಇತರೆ ಕಚ್ಚಾ ಆಹಾರ ಪದಾರ್ಥಗಳನ್ನು ಎಂ.ಎಸ್.ಪಿ.ಟಿ.ಸಿ. ಗಳು ಸ್ಥಳೀಯವಾಗಿ ಖರೀದಿಸಲು ತಿಳಿಸಲಾಗಿದೆ.
- ರಾಜ್ಯದ 137 ಎಂ.ಎಸ್.ಪಿ.ಟಿ.ಸಿಗಳ ಬಲವರ್ಧನೆಗೊಳಿಸಲು ಮತ್ತು BIS ಪರವಾನಗಿ ಪಡೆಯಲು ಅಗತ್ಯವಿರುವ ತಾಂತ್ರಿಕ ಸಹಾಯವನ್ನು DFRL, *CFTRI* ಮತ್ತು ಬಿ.ಐ.ಎಸ್. ಪರವಾನಗಿ ಪಡೆದ ಮಹಿಳಾ ಗುಂಪುಗಳು

ಒದಗಿಸುವುದಾಗಿ ತಿಳಿಸಿರುತ್ತವೆ. ಅದರಂತೆ ಎಂ.ಎಸ್.ಪಿ.ಟಿ.ಸಿ ಗಳು ಮೇಲೆ ತಿಳಿಸಿದ ಸಂಸ್ಥೆಗಳಿಂದ ತಾಂತ್ರಿಕ ಸಹಾಯವನ್ನು ಪಡೆಯಲು ತೀರ್ಮಾನಿಸಲಾಗಿರುತ್ತದೆ.

- ಸಮಿತಿಯು ಮೇಲಿನ ಅಭಿಪ್ರಾಯವನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಶಿಫಾರಸ್ಸು ಮಾಡಲು ತೀರ್ಮಾನಿಸಿತು.

ಈ ಮಧ್ಯೆ ಶ್ರೀಮತಿ ಸಂಗೀತಾ ಗದಗಿನ್, ಬಾಗಲಕೋಟೆ ಜಿಲ್ಲೆ ಇವರು ದಿನಾಂಕ: 14/02/2022 ರಂದು ರಿಟ್ ಅರ್ಜಿ ಸಂಖ್ಯೆ: 3522/2022 ರಲ್ಲಿ PIL ಸಲ್ಲಿಸಿರುತ್ತಾರೆ. ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ವಿಚಾರಣೆಗೆ ಬಂದು ರದ್ದುಪಡಿಸಲಾದ ದಿನಾಂಕ: 05/05/2021 ರ ಸರ್ಕಾರದ ಆದೇಶ ಮತ್ತು ದಿನಾಂಕ: 02/07/2020 ರ ಸುತ್ತೋಲೆಯನ್ನು ಮರುಸ್ಥಾಪಿಸಲು ಆದೇಶಿಸಲಾಗಿರುತ್ತದೆ. ತಾಂತ್ರಿಕ ಸಮಿತಿಯ ವರದಿಯ ಬಗ್ಗೆ ತೆಗೆದುಕೊಂಡ ಕ್ರಮದ ಕುರಿತು ತಿಳಿಸಲು ಆದೇಶಿಸಲಾಗಿದೆ.

ಅಂತಿಮವಾಗಿ ರಾಜ್ಯ ಉಚ್ಚ ನ್ಯಾಯಾಲಯವು ಈ ಕೆಳಕಂಡಂತೆ ದಿನಾಂಕ: 27/05/2022 ರಂದು ಅಂತಿಮ ತೀರ್ಪನ್ನು ನೀಡಿರುತ್ತದೆ.

1. ಸರ್ಕಾರದ ಆದೇಶ ದಿನಾಂಕ: 15/05/2021 ಮತ್ತು 20/05/2021 ನ್ನು ನ್ಯಾಯಾಲಯವು ರದ್ದುಗೊಳಿಸಿರುತ್ತದೆ.
2. ಸುತ್ತೋಲೆ ದಿನಾಂಕ: 02/07/2020 ಮತ್ತು ಸರ್ಕಾರ ಹೊರಡಿಸಿರುವ ದಿನಾಂಕ: 05/05/2021 ನ್ನು ರಾಜ್ಯ ಸರ್ಕಾರವು ಯಾವುದೇ ವಿಳಂಬವಿಲ್ಲದೇ ತಕ್ಷಣ ಅನುಷ್ಠಾನಗೊಳಿಸುವುದು.
3. ರಾಜ್ಯ ಸರ್ಕಾರವು ಸಮಗ್ರ ಶಿಶು ಅಭಿವೃದ್ಧಿ ಯೋಜನೆಯನ್ನು ಯಾವುದೇ ವಿಳಂಬವಿಲ್ಲದೇ ಅನುಷ್ಠಾನಗೊಳಿಸಲು ನಿರ್ದೇಶಿಸಿದೆ. ಅನುಷ್ಠಾನಗೊಳಿಸುವಾಗ ಕೇಂದ್ರ ಸರ್ಕಾರದ ಮಾರ್ಗಸೂಚಿ ದಿನಾಂಕ: 24/02/2009 ಹಾಗೂ ನಿಯಮ ದಿನಾಂಕ: 06/10/2017 ಹಾಗೂ ದಿನಾಂಕ: 19/08/2021 ರ ತಾಂತ್ರಿಕ ಸಮಿತಿ ವರದಿ ಮತ್ತು ಇತರೆ ಸರ್ಕಾರದ ನಿಯಮಗಳು, ಆದೇಶಗಳು, ಸುತ್ತೋಲೆಗಳನ್ನು ಗಮನವಿಟ್ಟುಕೊಳ್ಳಲು ಸೂಚಿಸಲಾಗಿದೆ.
4. ಪರಿಷ್ಕೃತ ಪೌಷ್ಠಿಕ ಮತ್ತು ಆಹಾರದ ನಿಯಮಗಳನ್ನು ಪಾಲಿಸಿ ನಿರ್ಧಿಷ್ಟತೆ ಮತ್ತು ಮಾನದಂಡಗಳನ್ವಯ ಆಹಾರ ಪದಾರ್ಥಗಳನ್ನು ಸರಬರಾಜು ಮಾಡದಿದ್ದಲ್ಲಿ ಕೂಡಲೇ ಅಮಾನತ್ತುಗೊಳಿಸಿ ಸರ್ಕಾರದ ಆದೇಶ ದಿನಾಂಕ: 05/05/2021 ಮತ್ತು ಸುತ್ತೋಲೆ ದಿನಾಂಕ: 02/07/2020 ರಲ್ಲಿ ತಿಳಿಸಿರುವಂತೆ ಗುಣಮಟ್ಟದ ಆಹಾರವನ್ನು ಸರಬರಾಜು ಮಾಡಲು ಅಗತ್ಯ ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ ದಿನಾಂಕ: 05/05/2021 ರ ಸರ್ಕಾರದ ಆದೇಶದಲ್ಲಿ ತಿಳಿಸಿದಂತೆ ಒಪ್ಪಂದವನ್ನು ಮಾಡಿಕೊಳ್ಳುವುದು.
5. ಆಹಾರ ಪದಾರ್ಥಗಳ ಸರಬರಾಜಿನಲ್ಲಿ ಯಾವುದೇ ಅಡಚಣೆ ಇರದಂತೆ ನೋಡಿಕೊಳ್ಳಲು ಪ್ರತಿವಾದಿಗಳಿಗೆ ನಿರ್ದೇಶಿಸುವುದೇನೆಂದರೆ ದಿನಾಂಕ: 05/05/2021 ರ ಆದೇಶದಲ್ಲಿ ತಿಳಿಸಿರುವಂತೆ ಪಕ್ಷಗಳು ತಮ್ಮ ಜವಾಬ್ದಾರಿಯನ್ನು ನಿರ್ವಹಿಸಲು ವಿಫಲರಾದಲ್ಲಿ ಒಪ್ಪಂದದಲ್ಲಿನ ವಸ್ತುಗಳನ್ನು ಸುತ್ತೋಲೆ ದಿನಾಂಕ: 02/07/2020 ರಲ್ಲಿ ತಿಳಿಸಿರುವಂತೆ ಯಾವುದೇ ಅರ್ಹ ಘಟಕಗಳಿಂದ ಸ್ಪರ್ಧಾತ್ಮಕ ದರಗಳಲ್ಲಿ ಖರೀದಿಸಲು ಕ್ರಮ ಕೈಗೊಳ್ಳುವುದು ಮತ್ತು ಫಲಾನುಭವಿಗಳ ಹಿತದೃಷ್ಟಿಯಿಂದ ಅದನ್ನು ಅಂಗನವಾಡಿ ಕೇಂದ್ರಗಳಿಗೆ ಸರಬರಾಜು ಮಾಡುವುದು.
6. ರಾಜ್ಯ ಸರ್ಕಾರವು ನ್ಯಾಯಾಲಯದ ಆದೇಶವನ್ನು ಅನುಷ್ಠಾನಗೊಳಿಸಿರುವ ಬಗ್ಗೆ 3 ತಿಂಗಳಲ್ಲಿ ಅನುಪಾಲನಾ ವರದಿಯನ್ನು ಸಲ್ಲಿಸಲು ಆದೇಶಿಸಿದೆ.
7. ಸಂದರ್ಭ ಬಂದಲ್ಲಿ ರಿಟ್ ಅರ್ಜಿ ಸಂಖ್ಯೆ: 3522/2022 ರ ಅರ್ಜಿದಾರರಿಗೆ ಈ ರಿಟ್ ಅರ್ಜಿಯನ್ನು ಪುನ: ಸಲ್ಲಿಸುವ ಸ್ವಾತಂತ್ರ್ಯವನ್ನು ಕಾಯ್ದಿರಿಸಲಾಗಿದೆ.

ರಾಜ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ರಾಜ್ಯ ಸರ್ಕಾರವು ದಿನಾಂಕ: 22/08/2022 ರಲ್ಲಿ ಆದೇಶ ಹೊರಡಿಸಿ ದಿನಾಂಕ: 15/05/2021 ಮತ್ತು 20/05/2021 ರಲ್ಲಿ ಹೊರಡಿಸಲಾದ ಆದೇಶಗಳನ್ನು ರದ್ದುಪಡಿಸಲಾಗಿದೆ. ಮುಂದುವರೆದು,

ನ್ಯಾಯಾಲಯದ ಆದೇಶದಂತೆ ಸುತ್ತೋಲೆ ದಿನಾಂಕ: 02/07/2020 ಮತ್ತು ಸರ್ಕಾರದ ಆದೇಶ ದಿನಾಂಕ: 05/05/2021 ನ್ನು ಮರುಸ್ಥಾಪಿಸಲಾಗಿದೆ. ಸದರಿ ಆದೇಶದಲ್ಲಿ ಸರ್ಕಾರದ ಆದೇಶ ದಿನಾಂಕ: 05/05/2021 ಮತ್ತು ಸುತ್ತೋಲೆ ದಿನಾಂಕ: 02/07/2020 ರಲ್ಲಿ ತಿಳಿಸಿರುವಂತೆ ಗುಣಮಟ್ಟದ ಆಹಾರ ಪದಾರ್ಥಗಳನ್ನು ಸರಬರಾಜು ಮಾಡಲು ದಿನಾಂಕ 05/05/2021 ರ ಆದೇಶದಂತೆ ಒಪ್ಪಂದ ಮಾಡಿಕೊಳ್ಳಲು ತಿಳಿಸಲಾಗಿದೆ.

ಸರ್ಕಾರದ ಆದೇಶ ದಿನಾಂಕ: 05/05/2021 ಹಾಗೂ ದಿನಾಂಕ: 22/08/2022 ರ ಇಲಾಖೆಯ ಸುತ್ತೋಲೆ ದಿನಾಂಕ: 02/07/2020 ಹಾಗೂ ನ್ಯಾಯಾಲಯದ ಆದೇಶ ದಿನಾಂಕ: 27/05/2022 ರನ್ವಯ ನಿಯಮಾನುಸಾರ ಕ್ರಮ ವಹಿಸುವಂತೆ ತಿಳಿಸಿ ಜಿಲ್ಲೆಗಳಿಗೆ ಪತ್ರ ಬರೆಯಲಾಗಿದೆ ಹಾಗೂ ಈ ಬಗ್ಗೆ ರಾಜ್ಯ ಉಚ್ಚ ನ್ಯಾಯಾಲಯಕ್ಕೆ ದಿನಾಂಕ: 06/12/2022 ರಂದು ನ್ಯಾಯಾಲಯಕ್ಕೆ ಅನುಪಾಲನಾ ವರದಿ ಸಲ್ಲಿಸಲಾಗಿದೆ.

ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ 137 ಎಂ.ಎಸ್. ಪಿ.ಟಿ.ಸಿ ಗಳ ಪೈಕಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕು ಎಂ.ಎಸ್.ಪಿ.ಟಿ.ಸಿ. ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕು ಎಂ.ಎಸ್.ಪಿ.ಟಿ.ಸಿ.ಗಳು ಬಿ.ಐ.ಎಸ್. ಪರವಾನಗಿಯನ್ನು ಇತ್ತೀಚೆಗೆ ಪಡೆದಿರುತ್ತವೆ.

ರಾಜ್ಯ ಉಚ್ಚ ನ್ಯಾಯಾಲಯದ ತೀರ್ಪಿನಂತೆ ಎಂ.ಎಸ್.ಪಿ.ಟಿ.ಸಿ. ಗಳು ದಿನಾಂಕ: 02/07/2020ರ ಸುತ್ತೋಲೆಯಲ್ಲಿ ತಿಳಿಸಿದಂತೆ ಬಿ.ಐ.ಎಸ್. ಪರವಾನಗಿ ಪಡೆದ ಹಾಗೂ ಸುತ್ತೋಲೆಯಲ್ಲಿನ ಷರತ್ತುಗಳನ್ನು ಪೂರೈಸುವ ಯಾವುದೇ ಮಹಿಳಾ ಗುಂಪುಗಳ ಜೊತೆ ತಾಂತ್ರಿಕ ನೆರವನ್ನು ಪಡೆಯಲು ಒಪ್ಪಂದ ಮಾಡಿಕೊಳ್ಳಬಹುದಾಗಿರುತ್ತದೆ. ಕೇವಲ ಮೂರು ಸಂಸ್ಥೆಗಳಿಂದ ಮಾತ್ರ ಒಪ್ಪಂದ ಮಾಡಿಕೊಳ್ಳಲು ಇಲಾಖಾ ವತಿಯಿಂದ ಯಾವುದೇ ಸೂಚನೆಯನ್ನು ನೀಡಿರುವುದಿಲ್ಲ.

**ಮಮಇ 413 ಐಸಿಡಿ 2022**

Halappa B

(ಆಚಾರ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂ ವಿಜ್ಞಾನ ಹಾಗೂ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ
ಸಚಿವರು.